**<u>ಸಾಕ್ಷಿಯನ್ನು ದಿಃ 25.11.2025 ರಂದು ಕರೆಸಿ ಪ್ರಮಾಣವಚನ ಭೋದಿಸಲಾಯಿತು.</u>**

**<u>ಪಾಟೀ ಸವಾಲುಃ 1, 3 ಮತ್ತು 4 ನೇ ಪ್ರತಿವಾದಿ ಪರ ಶ್ರೀ ಎಸ್ ಎಸ್ ಜಿ ವಕೀಲರಿಂದಃ-</u>**

ಈ ದಾವೆಯಲ್ಲಿ ಹೂಡಿರುವ ಸ್ವತ್ತು ಬಸಮ್ಮಣ್ಣಿ ರವರಿಗೆ ಅವರ ತಂದೆ ನಂಜುಂಡಾರಾಧ್ಯ ರವರಿಂದ ಬಂದಂತಹ ಸ್ವತ್ತು ಎಂದರೆ ಸರಿ. ಆದಕಾರಣ ಅಜ್ಜಿ ಬಸಮ್ಮಣ್ಣಿ ರವರಿಗೆ ಅದು ಪಿತ್ರಾರ್ಜಿತ ಸ್ವತ್ತು ಎಂದರೆ ಸರಿ. ಪ್ರತಿವಾದಿಯವರು ಸಲ್ಲಿಸಿದ ಲಿಖಿತ ವಾದದಲ್ಲಿ ಬರೆದಿರುವ ಅಂಶಗಳನ್ನು ನಾನು ತಿಳಿದುಕೊಂಡಿದ್ದೇನೆ. ಬಸಮ್ಮಣ್ಣಿ ರವರಿಗೆ ಎಷ್ಟು ಮಕ್ಕಳು ಎಂದು ವಂಶವೃಕ್ಷವನ್ನು ಕೊಟ್ಟಿಲ್ಲ ಎಂದರೆ ಸರಿಯಲ್ಲ. ದಾವೆಯಲ್ಲಿ ಬಸಮ್ಮಣ್ಣಿ ರವರಿಗೆ ಎಷ್ಟು ಜನ ಮಕ್ಕಳು ಎಂದು ಬರೆಸಿಲ್ಲ ಎಂದರೆ ಸರಿಯಲ್ಲ. ನನಗೆ ಕನ್ನಡ ಓದಲು ಮತ್ತು ಬರೆಯಲು ಬರುತ್ತದೆ. ದಾವಾ ಸ್ವತ್ತುಗಳನ್ನು ನೋಡಿ ಅದರಲ್ಲಿ ವಂಶವೃಕ್ಷವನ್ನು ತೋರಿಸಿಲ್ಲ ಎಂದರೆ ಸರಿ ಎನ್ನುತ್ತಾರೆ. ಅದೆ ರೀತಿ ವಂಶವೃಕ್ಷದ ದಾಖಲೆಯನ್ನು ಸಹ ಹಾಜರು ಪಡಿಸಿಲ್ಲ ಎಂದರೆ ಸರಿ.

ಬಸಮ್ಮಣಿ ರವರಿಗೆ 4 ಜನ ಗಂಡು ಮಕ್ಕಳು, ಮೂವರು ಹೆಣ್ಣು ಮಕ್ಕಳು. ಸದರಿ ಹೆಣ್ಣು ಮಕ್ಕಳೆಂದರೆ ಮಹೇಶ್ವರಿ, ಉಮಾ, ಗಿರಿಜಾ ಆಗಿರುತ್ತಾರೆ. ಅದರಲ್ಲಿ ಗಿರಿಜಾ ರವರು ತೀರಿಕೊಂಡಿರುತ್ತಾರೆ. ಗಿರಿಜಾ ರವರಿಗೆ ಗಂಡು ಮಕ್ಕಳು ಇರಲಿಲ್ಲ, ಅವರು ಮದುವೆ ಅಗಿರಲಿಲ್ಲ. ಸದರಿ ಗಿರಿಜಾ ರವರಿಗೆ ಮದುವೆ ಆಗದೆ ತೀರಿಕೊಂಡಿರುವ ವಿಚಾರವನ್ನು ದಾವೆಯಲ್ಲಿ ಬರೆಸಿಲ್ಲ. ಬಸಮ್ಮಣಿ ರವರಿಗೆ ಅವರ ತಂದೆ ಮನೆಯಿಂದ ಬಂದಂತಹ ಸ್ವತ್ತಾದ ಕಾರಣ ಅವರು ಜೀವಿತಾಕಾಲದಲ್ಲಿ ಅವರೆ ಮಾಲೀಕರಾಗಿ ಅನುಭವಿಸಿಕೊಂಡು ಬಂದಿದ್ದಾರೆ ಎಂದರೆ ಸರಿ. ಬಸಮ್ಮಣಿ ರವರು ತಮ್ಮ ಜೀವಿತಾ ಕಾಲದಲ್ಲಿ ನೊಂದಾಯಿತ ವಿಲ್ ಅನ್ನು ಬರೆದಿದ್ದಾರೆ ಎಂದರೆ ಸರಿಯಲ್ಲ. ಸದರಿ ವಿಲ್ ಬರೆದಿದ್ದಾರೆ ಎಂಬ ವಿಷಯ ಪ್ರತಿವಾದಿಗಳು ತಕರಾರು ಸಲ್ಲಿಸುವಾಗ ಗೊತ್ತಾಗಿತ್ತು. ಬಸಮ್ಮಣಿ ರವರ ಸ್ವಯಾರ್ಜಿತ

ಸ್ವತ್ತಿನಲ್ಲಿ ನಮಗೆ ಯಾರಿಗೂ ಹಕ್ಕು ಇಲ್ಲ ಎಂದರೆ ಸರಿಯಲ್ಲ, ಅವರು ವಿಲ್ ಬರೆದ ಕಾರಣ ಭಾಗ ಕೇಳಲು ಬರುವುದಿಲ್ಲ ಎಂದರೆ ಸಾಕ್ಷಿ ಅವರು ಯಾವುದೆ ವಿಲ್ ಬರೆದಿಲ್ಲ ಎನ್ನುತ್ತಾರೆ.

ನಮ್ಮ ದಾವೆಯಲ್ಲಿ ಬಸಮ್ಮಣಿ ರವರು ಯಾವ ವರ್ಷ, ತಿಂಗಳು ತೀರಿಕೊಂಡರು ಎಂದು ಬರೆದಿಲ್ಲ ಎಂದರೆ ಸರಿಯಲ್ಲ. ಸಾಕ್ಷಿ ಪುನಃ ಅವರು ತೀರಿಕೊಂಡ ದಿನಾಂಕ ವರ್ಷ ತಿಂಗಳು ಬರೆಸಿಲ್ಲ ಎಂದು ಒಪ್ಪುತ್ತಾರೆ. ಬಸಮ್ಮಣಿ ನನಗೆ ಅಜ್ಜಿಯಾಗಬೇಕು. ನಮ್ಮ ದಾವೆಯಲ್ಲಿ ಹಾಗೂ ಮುಖ್ಯ ವಿಚಾರಣಾ ಪ್ರಮಾಣ ಪತ್ರದಲ್ಲಿ ಬಸಮ್ಮಣಿ ರವರನ್ನು ನಾವೆ ನೋಡಿಕೊಳ್ಳುತ್ತಿದ್ದೇವು ಎಂಬ ಬಗ್ಗೆ ಬರೆಸಿಲ್ಲ ಎಂದರೆ ಸರಿ. ಅವರನ್ನು ಅವರ ಮಕ್ಕಳಾದ ಉಮಾ, ಮಹೇಶ್ವರಿ ಹಾಗೂ ಗಿರಿಜಮ್ಮ ರವರು ನೋಡಿಕೊಳ್ಳುತ್ತಿದ್ದ ಕಾರಣ ಅವರ ತಂದೆ ಮನೆ ಕಡೆಯಿಂದ ಬಂದ ಸ್ವತ್ತನ್ನು ಬಸಮ್ಮಣಿ ರವರು ವಿಲ್ ಬರೆದಿರುತ್ತಾರೆ ಎಂದರೆ ಸರಿಯಲ್ಲ. ಬಸಮ್ಮಣಿರವರಿಗೆ ಕಾಯಿಲೆ ಇತ್ತು ಆ ಕಾರಣ ಕಾಯಿಲೆಯಿಂದಲೇ ನರಳಿ ತೀರಿಕೊಂಡರು ಎಂದರೆ ಸರಿಯಲ್ಲ. ತಂದೆ ಮನೆ ಕಡೆಯಿಂದ ಬಂದ ಸ್ವತ್ತಿಗೆ ಸಂಬಂಧಿಸಿದಂತೆ ಅವರು ವಿಲ್ ಬರೆದ ಕಾರಣ ಸದರಿ ಆಸ್ತಿಗಳಲ್ಲಿ ನಮಗೆ ಯಾವುದೆ ಹಕ್ಕು ಇಲ್ಲ ಎಂದರೆ ಸರಿಯಲ್ಲ.

ನಾವು ವಾಸ ಮಾಡುತ್ತಿರುವ ಮನೆಯನ್ನು ಈ ದಾವೆಯಲ್ಲಿ ಸೇರಿಸಿಲ್ಲ, ಆ ಸಂಬಂಧ ಇನ್ನೊಂದು ಕೇಸು ಇರುತ್ತದೆ.ಭಾಗಾಂಶ ಕೇಳಿ ಪಂಚಾಯಿತಿ ಮಾಡಿದ್ದರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಬಿಳಿಕೆರೆ ವ್ಯಾಪ್ತಿಯಲ್ಲಿ ಜಮೀನಿನ ಬೆಲೆ ಎಕರೆಗೆ ಕೋಟಿವರೆಗೂ ಇರುತ್ತದೆ ಎಂದರೆ ಸರಿ. ಅಸ್ತಿಯನ್ನು ಲಪಟಾಯಿಸುವ ಉದ್ದೇಶದಿಂದ ಸುಳ್ಳು ಕೇಸ್ ಹಾಕಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಕೇಸ್ ಹಾಕಿರುವುದು 2024 ನೇ ಸಾಲಿನಲ್ಲಿ ಎಂದರೆ ಸರಿ.2024 ನೇ ಸಾಲಿನ ಆರ್.ಟಿ.ಸಿಯನ್ನು ಹಾಜರು ಪಡಿಸಿದ್ದೇನೆ ಎಂದರೆ ಸರಿಯಲ್ಲ. ಸದರಿ ಆರ್.ಟಿ.ಸಿಯಲ್ಲಿ ನಮ್ಮ ಹೆಸರುಗಳು ಇಲ್ಲ ಎಂದರೆ ಸರಿ. ದಾವಾ ಸ್ವತ್ತಿನ ಸ್ವಾಧೀನದಲ್ಲಿ ನಾವುಗಳು ಇಲ್ಲ ಎಂದರೆ ಸರಿ. ಮೊದಲು

ಇದ್ದೇವು ಆದರೆ ಈಗ ಇಲ್ಲ ಎನ್ನುತ್ತಾರೆ. ಈ ಎಲ್ಲಾ ಕಾರಣಕ್ಕಾಗಿ ನಾವು ಭಾಗಾಂಶ ಕೇಳಲು ಹಕ್ಕುಳ್ಳವರಲ್ಲ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)
ಓ ಹೇ ಕೇ ಸ ಇದೆ.,

(ಭಾಗ್ಯಮ್ಮ)
ಹೆಚ್ಚುವರಿ ಹಿರಿಯ ಸಿವಿಲ್ ಜಡ್ಜ್
ಮತ್ತು ಜೆ.ಎಂ.ಎಫ್.ಸಿ.,ಹುಣಸೂರು.